

ನೆಸ್ ನದಿ ತಟದಲ್ಲಿ ಹರಡಿರುವ
ಇನ್ವರ್‌ನೆಸ್ ನಗರ



ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿಟ್ಟಿರುವ
'ಮಮ್ಮಿ'ಗಳು

ಸಮೀಕ್ಷೆ ನಡೆಸಿದೆ. ಈಗಾಗಲೇ ಇಂಗ್ಲೆಂಡಿನಲ್ಲಿ ಒಂದೆರಡು ಸಂಗ್ರಹಾಲಯಗಳನ್ನು ನೋಡಿದ್ದರೂ, ಅಲ್ಲೇ ನಡೆಯುವಷ್ಟು ದೂರದಲ್ಲಿದ್ದ ಇನ್ವರ್‌ನೆಸ್ ಸಂಗ್ರಹಾಲಯ ನೋಡೋಣವೆಂದು ಹೇಳಿದೆ. ಅರೆ ಮನಸ್ಸಿನಿಂದ ನನ್ನೊಂದಿಗೆ ಯಜಮಾನರೂ, ಕುಣಿಕಾಲಿನೊಂದಿಗೆ ಮಗಳೂ, ಹೊರದೇಶದಲ್ಲಿದ್ದು ಬಂದಂಥ ಗಾಂಭೀರ್ಯದಿಂದ ಮಗನೂ ಹೆಜ್ಜೆ ಹಾಕಿದರು.

ಇನ್ವರ್‌ನೆಸ್ ಕೆಲವೇ ಸಾವಿರದಷ್ಟು (ಅಂದಾಜು 47,000) ಜನಸಂಖ್ಯೆ ಹೊಂದಿರುವ ಉತ್ತರ ಸ್ಕಾಟ್ಲೆಂಡ್‌ನ ನಗರ. ಸಾಮಾನ್ಯವಾಗಿ ಕೊರೆಯುವ ಚಳಿ, ಹಿಮ ಇದ್ದರೂ ನಾವು ಹೋಗಿದ್ದ ಜುಲೈ ಕೊನೆಯಲ್ಲಿ ತುಂಬಾ ಹಿತಕರ ವಾತಾವರಣ ಇತ್ತು. ನೆಸ್ ನದಿ ನಗರದ ಉದ್ದಕ್ಕೂ ಹರಿಯುವುದರಿಂದ ಇನ್ವರ್‌ನೆಸ್ ಎಂಬ ಹೆಸರು ಹುಟ್ಟಿರಬಹುದು. ನಗರದಲ್ಲಿ ಎಲ್ಲಿಗೆ ಹೋಗಬೇಕೆಂದರೂ ನಡೆದೇ ಹೋಗಬಹುದು. ಅಷ್ಟು ಚಿಕ್ಕ ಊರು. ಈ ನಗರವನ್ನು ನೋಡಿದರೆ ನಮ್ಮ ರವಿಚಂದ್ರನ್ ಹಾಡು 'ಇದು ಹೂವಿನ ಲೋಕವೇ...' ನೆನಪಾಗುತ್ತದೆ.

ಸಂಗ್ರಹಾಲಯಕ್ಕೆ ಹೋಗುವ ದಾರಿಯಲ್ಲಿ ಕಾಂಪೌಂಡ್ ಇರದ ಮನೆಗಳ ಮುಂದಿದ್ದ ಬಣ್ಣ ಬಣ್ಣದ ಹೂವಿನ ಲೋಕ ಕುಣಿದಾಡುವ ಖುಷಿ ತಂದಿತು. ದೊಡ್ಡ ದೊಡ್ಡ ಹೂಗಳನ್ನು ಮುಟ್ಟಿ ಮುಟ್ಟಿ ನಿಧಾನವಾಗಿ ನಡೆಯುತ್ತ ಹೋದಂತೆ ಒಂದು ಬದಿ ನೆಸ್ ನದಿ ಹರಿಯುವ ನೋಟ. ಇನ್ವರ್‌ನೆಸ್‌ಗೆ ಬರುವ ದಾರಿಯಲ್ಲಿ, ಇಪ್ಪತ್ತನೇ ಶತಮಾನದ ಆರಂಭದಲ್ಲಿ ಮಹೋರಗ ಸಂಬಂಧಿ ದೈತ್ಯವೊಂದು ಉಳಿದಿರಬಹುದು ಎಂದು ಪ್ರಪಂಚದ ಗಮನವನ್ನು ಸೆಳೆದ, ಮಾನ್ಸ್ಟರ್ ಈಗಲೂ ಇದರೊಳಗೆ ಅಡಗಿರಬಹುದೇನೋ ಎಂದು ಭ್ರಮೆ ಹುಟ್ಟಿಸುವಷ್ಟು ದೊಡ್ಡ ಸರೋವರ ಸಿಗುತ್ತದೆ. ಅದೇ ಲಾಚ್ ನೆಸ್.

ಲಾಚ್ ಎಂದರೆ ಸ್ಕಾಟಿಷ್ ಭಾಷೆಯಲ್ಲಿ ಸರೋವರ. ನೆಸ್ಸೀ ಎಂದು ಹೆಸರಿಟ್ಟಿರುವ ಆ ಲಾಚ್ ನೆಸ್ ಮಾನ್ಸ್ಟರ್‌ಗೆ ತೀರಾ ಇತ್ತೀಚೆಗೆ ಕೂಡ ಹುಡುಕಾಟ ನಡೆದಿದೆ. ಆ ಸರೋವರವೇ ನೆಸ್ ನದಿಯ ಉಗಮ ಸ್ಥಾನ. ನೆಸ್ ನದಿ, ನಿಸ್ಸಂದೇಹವಾಗಿ ನಾನು ಜೀವನದಲ್ಲಿ ಕಂಡ ಅತ್ಯಂತ ಶುಭ್ರ ನದಿ. ನದಿ ಪಾತ್ರದಲ್ಲಿ ಮರಗಳು, ಜರೀ ಗಿಡಗಳಿಂದ ಸ್ವರ್ಗ ಸದೃಶ ಎನಿಸುವಂತಿದೆ. ನಗರದ ಮಧ್ಯದಲ್ಲೇ ಹರಿದರೂ, ನೋಡಿದ ಕೂಡಲೇ ಬೊಗಸೆಯಲ್ಲಿ ಹೀರೋಣ ಎನಿಸುವಷ್ಟು ಶುಭ್ರ ನೀರು.

300 ಎಂಎಲ್ ಕುಡಿಯುವ ನೀರಿಗೆ 3 ಪೌಂಡ್ ತೆರಬೇಕಾದ ದೇಶದಲ್ಲಿ ನೀರಿನ ಬೆಲೆ ಅರಿತು ನದಿಯನ್ನು ಸ್ವಚ್ಛವಾಗಿಟ್ಟಿದ್ದಾರೆ. ಐದು ರೂಪಾಯಿ ನಾಣ್ಯ ಹಾಕಿದರೆ 25 ಲೀಟರ್ ಕುಡಿಯುವ ನೀರು ಸಿಗುವ ವ್ಯವಸ್ಥೆ ಇರುವ ನಮ್ಮ ದೇಶದಲ್ಲಿ ನದಿಗಳ ನೀರು ಬೊಗಸೆಯಲ್ಲಿ ಕುಡಿಯುವುದಿರಲಿ, ಮುಟ್ಟಲೂ ಯೋಚಿಸುವಂತೆ ಇಟ್ಟುಕೊಂಡಿರುವುದು ನೆನಪಾಯಿತು. ಅಲ್ಲಿ ಬೆಳೆಯುವ ಮೂರು ಮತ್ತೊಂದು ಎನ್ನುವಷ್ಟೇ ವಿಧದ ಮರಗಳನ್ನು ನದಿ


